ಮಾಡದೆಯೇ, ಕೇವಲ ಸುಜಾತಾಳಿಗೆ ಸಾಂತ್ವನ ಹೇಳಿ ಅವಳ ದುಃಖದಲ್ಲಿ ಭಾಗಿಯಾಗಿರುವುದೇ ಅನುಮಾನಕ್ಕೆಡೆಮಾಡಿಕೊಟ್ಟು ಪೊಲೀಸರನ್ನು ಆಹ್ವಾನಿಸುವುದಾದರೆ, ಅಖ್ತರನ ವಿಷಯದಲ್ಲೂ ಇಂಥದೇ ಅಪಾರ್ಥ ಅಡಗಿರಬಹುದೇ ಎಂದು ಅನಿರುದ್ಧ ಯೋಚಿಸಿದ. ಯಾಕೋ ತನ್ನ ಪರಿಸ್ಥಿತಿಯೇ ಬೇರೆ – ಅಖ್ತರನದೇ ಬೇರೆ ಅನ್ನಿಸಿತು.

ಈಗ ಸುಜಾತಾ–ಮುಕುಂದಸಾಗರರ ವಿಚಾರದಲ್ಲಿ ಪೊಲೀಸರನ್ನು ನಿಭಾಯಿಸುತ್ತಿರುವ ಕಾಲಕ್ಕೆ ಮತ್ತು ಅಖ್ತರನೂ ರಂಗಪ್ರವೇಶ ಮಾಡಿದರೆ ತನ್ನ ಪರಿಸ್ಥಿತಿ ಏನಾಗಬಹುದೆಂದು ಅನಿರುದ್ಧನಿಗೆ ಅನುಮಾನಗಳು ಬಂದವು. ಈ ಸುಜಾತಾಳ ವಿಚಾರವನ್ನು ನಿಭಾಯಿಸುವ ಸಮಯಕ್ಕೇ ಅಖ್ತರನ ಜೊತೆಗೆ ಏರ್ಪಡಿಸುವ ಸಂಪರ್ಕದ ಕೋನವೂ ಸೇರಿ ಅನುಮಾನಗಳು ಹೆಚ್ಚಾಗಿ ಮನಃಶಾಂತಿ ಇಲ್ಲವಾದಂತಾಗುತ್ತದೆಂದು ಅವನು ಯೋಚಿಸತೊಡಗಿದ. ಮೇಲಾಗಿ ಅವನ ಕರೆಯನ್ನು ಸ್ವೀಕರಿಸುವ ಮೊದಲು ಅವನು ಯಾವ ಕಾರಣಕ್ಕಾಗಿ ಫೋನ್ ಮಾಡುತ್ತಿದ್ದಾನೆ ಎಂದು ತಿಳಿಯುವ ಅವಶ್ಯಕತೆಯೂ ಇತ್ತು.

ಇದರ ಬಗ್ಗೆ ತಾನೊಬ್ಬನೇ ಯಾವುದೇ ನಿಲುವನ್ನು ತೆಗೆದುಕೊಳ್ಳುವುದು ಸರಿಯಲ್ಲ ಎಂದುಕೊಂಡ ಅನಿರುದ್ಧ ಕವಿತಾಳ ಜೊತೆ ಮಾತನಾಡಿದ. ಅಖ್ತರ ಕರೆ ಮಾಡಲು ಪ್ರಯತ್ನಿಸುತ್ತಿರುವ ವಿಚಾರವನ್ನು ಅವಳಿಗೆ ಹೇಳಿದ. ಅದೇ ಸಮಯಕ್ಕೆ – "ಕಾಂಟ್ ಟೇಕ್ ಯುವರ್ ಕಾಲ್. ಇನ್ ಎ ಮೀಟಿಂಗ್. ಸೆಂಡ್ ಎ ಮೆಸೇಜ್" ಎಂದು ಅಖ್ತರನಿಗೊಂದು ಮೆಸೇಜನ್ನೂ ಹಾಕಿದ.

"ಅನಿರುದ್ಧ – ಅವನು ಎಷ್ಟಾದರೂ ನಿನ್ನ ಗೆಳೆಯ. ನಮ್ಮಲ್ಲಿ ಉಳಕೊಂಡಿದ್ದಾಗ ಸರಿಯಾಗಿಯೇ ಇದ್ದ ಅಂತ ಅನ್ನಿಸುತ್ತಿತ್ತು. ಆದರೆ ಅವನು ಹೋದಸರ್ತಿ ನೈರೋಬಿಗೆ ಹೋದಮೇಲೆ ನಾವು ಈ ವಿಷಯ ಚರ್ಚಿಸಿದ್ದೆವು. ಅವನು ಬಂದಾಗ ನಾವು ಠಾಣೆಗೆ ಹಾಜರಿ ಹಾಕಬೇಕಾದ್ದನ್ನು ಮರೆಯಬೇಡ... ಹೀಗಾಗಿ ಐಎಂಎಚ್ಓ ಅವನ ಸ್ನೇಹವನ್ನು ಮುಂದುವರೆಸುವುದೂ ಬಿಡುವುದೂ ನಿನ್ನ ವಿಚಾರ... ಆದರೆ ಅವನನ್ನು ಯಾವುದೇ ಪರಿಸ್ಥಿತಿಯಲ್ಲಿ ನಮ್ಮ ಮನೆಯಲ್ಲಿ ಉಳಿದುಕೊಳ್ಳಲು ಆಹ್ವಾನಿಸಬೇಡ ಅಷ್ಟೇ..." ಎಂದು ಕವಿತಾ ಹೇಳಿದಳು.

ಯಾವುದಕ್ಕೂ ಇರಲೆಂದು ಒಮ್ಮೆ ಈ ಗೆಳೆಯ ಈಚೆಗೆ ಫೇಸ್‌ಬುಕ್ಕಿನಲ್ಲಿ ಯಾವ ರೀತಿಯ ಪೋಸ್ಟುಗಳನ್ನು ಹಾಕುತ್ತಿದ್ದಾನೆಂದು ನೋಡೋಣವೆನ್ನಿಸಿತು. ಅನ್–ಫ್ರೆಂಡ್ ಮಾಡಿದ್ದವನನ್ನು ಮತ್ತೆ ಫ್ರೆಂಡ್ ಮಾಡಿಕೊಂಡು ಇದನ್ನು ನೋಡಬೇಕಿತ್ತು. ಆಫ್ಟರಾಲ್ ಹಲವು ವರ್ಷಗಳಿಂದ ಕಳೆದು ಹೋಗಿದ್ದ ಅಖ್ತರನನ್ನು ಹುಡುಕಿದ್ದೇ ಈ ಫೇಸ್‌ಬುಕ್ಕಿನ ಮೂಲಕ ಎನ್ನುವುದನ್ನು ಅನಿರುದ್ಧ ಮರೆತಿರಲಿಲ್ಲ. ಈಚೆಗೆ ಅಖ್ತರ್ ಏನೆಲ್ಲಾ ಮಾಡುತ್ತಿರಬಹುದು ಎನ್ನುವ ಕುತೂಹಲದೊಂದಿಗೆ ಅನಿರುದ್ಧ ಫೇಸ್‌ಬುಕ್ಕಿಗೆ ಹೋಗಿ ಅಖ್ತರನ ಪ್ರೊಫೈಲ್ ಹುಡುಕಿದ, ಅದು ಕಾಣಿಸಲಿಲ್ಲ. ಇಂಟರ್ನೆಟ್ಟಿನಲ್ಲಿ ಅವನ ಹೆಸರು, ತನಗೆ ತಿಳಿದಿದ್ದ ಕೀವರ್ಡುಗಳನ್ನೆಲ್ಲಾ ಹಾಕಿ ಹುಡುಕಿದರೂ ಏನೂ ಕಾಣಿಸಲಿಲ್ಲ. ಇದರಿಂದಾಗಿ ಅನಿರುದ್ಧನ ಪ್ರಶ್ನೆಗಳು ತೀವ್ರಗೊಂಡವು.

ಅಷ್ಟರಲ್ಲಿ ಅನಿರುದ್ಧನ ಮೆಸೇಜಿಗೆ ಅಖ್ತರನ ಉತ್ತರವೂ ಬಂದಿತ್ತು – "ಸುಜಾತಾ ಮುಕುಂದಸಾಗರರ ಕಥೆಯ ಬಗ್ಗೆ ನನಗೆ ಈ ವರೆಗೂ ಏನೂ ತಿಳಿದಿರಲಿಲ್ಲ. ಟಿಲ್ ಐ ಗಾಟ್ ದಿಸ್ ಇ–ಮೇಲ್" ಎಂದು ಹೇಳಿ ತನಗೆ ಚಿನ್ಮಯ–ಶಿವಾನಿಯಿಂದ ಬಂದಿದ್ದ ಮಿಂಚಂಚೆಯ ಸ್ಕ್ರೀನ್ ಷಾಟನ್ನು ಕಳುಹಿಸಿದ್ದ. "ಐ ಜಸ್ಟ್ ವಾಂಟೆಡ್ ಟು ನೋ ವಾಟ್ಸ್ ಹ್ಯಾಪನಿಂಗ್. ನಾನು ಇಂಟರ್‌ನೆಟ್ಟಿನಲ್ಲಿರುವುದನ್ನೆಲ್ಲಾ ನೋಡಿದೆ. ಇಟ್ ಇಸ್ ಕನ್ಫ್ಯೂಸಿಂಗ್ ಅಂಡ್ ಸಿಕ್" ಎಂದು ಮೆಸೇಜನ್ನು ಕಳುಹಿಸಿದ್ದ. ಸಾಲದ್ದಕ್ಕೆ ಅವಳನ್ನು ಭೇಟಿ ಮಾಡಲು – ಸಾಂತ್ವನ ಹೇಳಲು ಭಾರತಕ್ಕೆ ಬರಬೇಕೇ ಎನ್ನುವ ಪ್ರಶ್ನೆಯನ್ನೂ ಕೇಳಿದ್ದ. ಇದನ್ನು ಮೆಸೇಜುಗಳ ಮೂಲಕ ಪರಿಹರಿಸಲು ಸಾಧ್ಯವಿಲ್ಲ